ಸುಂಕ್ಲಮ್ಮ: ಚಾಪೆಯೇ ಬೆಡ್ಡು, ತೋಳೇ ದಿಂಬು, ಗೋಣಿಚೀಲವೇ ರಗ್ಗು.

ಸುಂಕ್ಲಮ್ಮನಿಗೆ ಎಲ್ಲರೆದುರು ತನ್ನ ಮನೆಯ ಗೌರವ ಹರಾಜು ಹಾಕುತ್ತಿದ್ದಾರೆನಿಸಿತು. ಯಾಕಾದರೂ ಇಲ್ಲಿ ಬಂದು ಇಕ್ಕಳದಲ್ಲಿ ಸಿಕ್ಕಿಕೊಂಡೆನೋ ಅಂದುಕೊಂಡಳು.

ನಟಿ: ಯಾವ ಬ್ರ್ಯಾಂಡಿನ ಯೋಗರ್ಟ್, ತುಪ್ಪ, ಚೀಸ್, ಪನ್ನೀರ್, ಕೋವ ಬಳಸ್ತೀರಿ ಸುಂಕ್ಲಮ್ಮಾಜಿ (ಸುಂಕ್ಲಮ್ಮ ಸಿಟ್ಟಿಗೆದ್ದು ಬೈದರೆ ಏನು ಮಾಡುವುದು ಎಂದು ನಟಿ ಭಯಪಟ್ಟಂತಿತ್ತು. ಅದಕ್ಕೆ ಮತ್ತೊಮ್ಮೆ ಸುಂಕ್ಲಮ್ಮಾಜಿ ಎನ್ನತೊಡಗಿದ್ದಳು.)

ಸುಂಕ್ಲಮ್ಮ: ಅವೆಲ್ಲ ಮುಂದಿನ ಜನ್ಮಕ್ಕಿಟ್ಟುಕೊಂಡೀನಕ್ಕ.

ನಟಿ: ಯಾವ ಬ್ರ್ಯಾಂಡಿನ ಹಾಲು ಬಳಸ್ತೀರಿ ಸುಂಕ್ಲಮ್ಮಾಜಿ.

ಸುಂಕ್ಲಮ್ಮ: ನಮ್ಮ ಓಣೇಲಿ ಗೋಣ್ಯಪ್ಪ ಅಂತ ಒಬ್ಬ ಎಮ್ಮೆ ಸಾಕಿದಾನೆ. ಅವನತ್ರ ಹುಣ್ಣಿಮೆಗೋ ಅಮಾಸೆಗೋ ಪಾವೋ ಚಟಾಕೋ ಹಾಲು ಕೊಂಡ್ಕಂತೀವಿ. ಎಮ್ಮೆ ಬ್ರ್ಯಾಂಡಿನ ಹಾಲು ಕಣಕ್ಕ.

ಇದು ಕೇಳಿದ ತಕ್ಷಣ ಸಭಾಂಗಣದಲ್ಲಿ ಜನ ಬಿದ್ದು ಬಿದ್ದು ನಗತೊಡಗಿದರು.

ನಟ ನಟಿಯರಿಗೆ ಸಾಕಾಗಿ ಹೋಗಿತ್ತು. ಪ್ರಶ್ನೋತ್ತರ ಅಲ್ಲಿಗೇ ಮುಗಿಸಿದರೆ ಅವರಿಗೆ ಬರುವ ದುಡ್ಡು ಸಿಗುವ ಗ್ಯಾರಂಟಿ ಇರಲಿಲ್ಲ.

ನಟಿ: ಸುಂಕ್ಲಮ್ಮಾಜಿ ನಿಮಗೀಗ ನಾಲ್ಕಾರು ಲಕ್ಷ ರೂಪಾಯಿ ದುಡ್ಡು ಸಿಕ್ಕರೆ ಏನ್ಮಾಡ್ತೀರಿ?

ಸುಂಕ್ಲಮ್ಮ: ಒಂದೇ ಒಂದು ಪೈಸೆ ವೇಸ್ಟ್ ಮಾಡದಂಗೆ ಮಕ್ಕಳನ್ನ ವಿದ್ಯಾವಂತರನ್ನಾಗಿ ಮಾಡ್ತೀನಿ ಕಣಕ್ಕ.

ನಟಿ: ಈ ಮಾಲ್‌ನಲ್ಲಿ ಏನು ಕೊಂಡ್ಕೊಳ್ತೀರಾ ಸುಂಕ್ಲಮ್ಮಾಜಿ?

ಸುಂಕ್ಲಮ್ಮ: ಇಲ್ಲಿರೋದೆಲ್ಲ ನನಗೆ ವೇಸ್ಟು. ಏನೇನೂ ಕೊಂಡ್ಕಳಲ್ಲ. ಇಲ್ಲಿ ಚೌಕಾಸಿ ಬೇರೆ ಇಲ್ವಲ್ಲಕ್ಕ. ಚೌಕಾಸಿ ಇಲ್ದಿದ್ರೆ ನನಿಗೆ ಕೊಂಡ್ಕೊಂಡಂಗೇ ಆಗಲ್ಲ.

ಪ್ರಶ್ನೆಗಳು ಮುಗಿದವು. ಸುಂಕ್ಲಮ್ಮನನ್ನು ಒಳಗೆ ಕರೆದುಕೊಂಡು ಹೋಗಿ ಹುಚ್ಚಯ್ಯನನ್ನು ಕರೆತಂದು ಪ್ರಶ್ನಿಸಲಾರಂಭಿಸಿದರು. ಆ ದಂಪತಿಗಳು ಒಂದೇ ಆತ್ಮ ಎರಡು ದೇಹ ಎಂಬಂತಿದ್ದರು. ಹತ್ತಾರು ವರ್ಷ ಕೂಡಿ ಬಾಳಿ ಅವರ ಆಲೋಚನೆ, ಭಾವನೆಗಳು ಒಂದೇ ಹದಕ್ಕೆ ಬಂದಿದ್ದವು. ತಮ್ಮ ಎಲ್ಲ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ತೊಡೆದುಬಿಟ್ಟಿದ್ದರು. ಹೊಂದಾಣಿಕೆ ಅಂದ್ರೇನು ಅನ್ನೋದು ಅವರಿಂದ ಕಲಿಯಬಹುದಿತ್ತು. ಹೀಗಾಗಿ ಹುಚ್ಚಯ್ಯನು ಸುಂಕ್ಲಮ್ಮ ಉತ್ತರಿಸಿದ ರೀತಿಯಲ್ಲೇ ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಿದ. ಒಂದೇ ಒಂದು ವ್ಯತ್ಯಾಸವೂ ಇರಲಿಲ್ಲ.

ನಾಲ್ಕನೆಯ ಜೋಡಿಯ ಪ್ರಶ್ನೋತ್ತರ ಮುಗಿದ ನಂತರ ಐದು ನಿಮಿಷಗಳ ವಿರಾಮದಲ್ಲಿ ಮತ್ತೊಬ್ಬ ನಟಿಯಿಂದ ಶಾಸ್ತ್ರೀಯ ನೃತ್ಯವಿತ್ತು. ಆದರದು ಯಾವುದೇ ಐಟಂ ಡ್ಯಾನ್ಸನ್ನು ಸೈಡ್ ಹೊಡೆಯುವಂತಿತ್ತು. ಅದು ಮುಗಿದ ಕೂಡಲೇ 'ಸಕತ್ ಸತಿಪತಿ' ಯ ವಿಜೇತರನ್ನು ಪ್ರಕಟಿಸಿದರು. ಪ್ರಶ್ನೋತ್ತರಕ್ಕೆ ಆಯ್ಕೆಯಾಗಿದ್ದ ಮೊದಲನೇ ಜೋಡಿಗೆ 'ಸಕತ್ ಸತಿಪತಿ3', ಎರಡನೇ ಜೋಡಿಗೆ 'ಸಕತ್ ಸತಿಪತಿ2', ಮೂರನೇ ಜೋಡಿಗೆ 'ಸಕತ್ ಸತಿಪತಿ1' ಬಹುಮಾನ ಎಂದು ತೀರ್ಪು ಹೊರಬಿತ್ತು. ಸರಿ ಉತ್ತರಗಳ ಜೊತೆ ಪ್ರಸ್ತುತ ಕಾರ್ಯಕ್ರಮವನ್ನು ಪ್ರಾಯೋಜಿಸಿದ್ದ ಕಂಪನಿಗಳು, ವೆಲಾಸಿಟಿ ವಾಹಿನಿ ಹಾಗೂ ಅಬ್ರಕಡಬ್ರ ಮಾಲ್‌ನ ಹೆಸರುಗಳನ್ನು ಎಷ್ಟು ಬಾರಿ ಹೇಳಿದ್ದಾರೆ ಎಂಬ ಆಧಾರದ ಮೇಲೆ ಬಹುಮಾನಗಳನ್ನು ಕಂಪ್ಯೂಟರ್ ಯಂತ್ರವೇ ನಿರ್ಣಯಿಸಿತ್ತು. ವಿಜೇತರಿಗೆ ನಗದು ಮತ್ತು ಸರಕುಗಳನ್ನು ಆ ಕೂಡಲೇ ವಿತರಣೆ ಮಾಡಿದರು.

ಮಾಲ್, ಟೀವಿ ಚಾನೆಲ್, ಪ್ರಾಯೋಜಕರು ಅಥವಾ ಯಾವ ಕಂಪನಿಯ ಹೆಸರನ್ನೂ ಒಮ್ಮೆ ಕೂಡ ಹೇಳಿರದ ಹುಚ್ಚಯ್ಯ ಸುಂಕ್ಲಮ್ಮರಿಗೆ 'ಸಕತ್ ಸತಿಪತಿ'ಯಲ್ಲಿ ಭಾಗವಹಿಸಿದ ಪ್ರಮಾಣ ಪತ್ರವನ್ನಷ್ಟೇ ಕೊಟ್ಟು ಕೈತೊಳೆದುಕೊಳ್ಳಲಾಯಿತು.

ಮಹಾಘಟವಾಣಿ ಹೆಂಗಸಾಗಿದ್ದ ಸುಂಕ್ಲಮ್ಮ ಮನೆ ಸೇರುವುದರೊಳಗೆ ಆ ಪ್ರಮಾಣ ಪತ್ರವನ್ನು ಹರಿದು ಚರಂಡಿಗೆಸೆದಳು.

●



